**ಸಾಕ್ಷಿಗೆ ದಿನಾಂಕ:25-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: 4 ನೇ ಪ್ರತಿವಾದಿ ಪರ ಶ್ರೀ. CSS ವಕೀಲರಿಂದ ::**

ಈ ದಾವೆಯಲ್ಲಿ ನಂತರದಲ್ಲಿ ಸೇರಿಸಿರುವ ಆಸ್ತಿಗಳ ಬಗ್ಗೆ ನನಗೆ ದಾವೆ ಹೂಡುವ ಸಮಯದಲ್ಲಿ ಮಾಹಿತಿ ಇತ್ತು ಎಂದರೆ ಸರಿ. ನನಗೆ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ನಡುವೆ ಯಾವುದೇ ದ್ವೇಷ ಇರುವುದಿಲ್ಲ. ಈಗ ಸೇರಿಸಿರುವ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾನು 1 ನೇ ಪ್ರತಿವಾದಿಯ ಬಳಿ ಹಿಂದೆಯೇ ವಿಚಾರಿಸಿರುತ್ತೇನೆ. 3 ನೇ ಪ್ರತಿವಾದಿ ದಾವಾ ಐಟಂ ನಂಬರ್ 13 ರಲ್ಲಿ ಅಂಗಡಿ ನಡೆಸುತ್ತಿರುವ ವಿಚಾರ ನನಗೆ ಮಾದಲೇ ಗೊತ್ತಿತ್ತು ಎಂದರೆ ಸರಿ. ಸದರಿ ಅಂಗಡಿಯನ್ನು 3 ನೇ ಪ್ರತಿವಾದಿ ದಾವೆ ಹೂಡುವ ಪೂರ್ವದಿಂದ ನಡೆಸುತ್ತಿದ್ದರು ಎಂದರೆ ನನಗೆ ಈಗ ನೆನಪಿಲ್ಲ. 6 ನೇ ಪ್ರತಿವಾದಿ ಗೀತಾ ಎನ್ನುವವರು 2 ನೇ ಪ್ರತಿವಾದಿಯ ಹೆಂಡತಿ ಆಗಿರುತ್ತಾರೆ ಎಂದರೆ ಸರಿ. 7 ನೇ ಪ್ರತಿವಾದಿ 3 ನೇ ಪ್ರತಿವಾದಿಯ ಹೆಂಡತಿ ಆಗಿರುತ್ತಾರೆ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ 8 ಮತ್ತು 9 ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಓ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: